# ಮುನ್ನುಡಿ

1. 31 ಮಾರ್ಚ್ 2021ಕ್ಕೆ ಅಂತ್ಯಗೊಂಡಿರುವ ಸಾಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ಭಾರತದ ಸಂವಿಧಾನದ 151 (2)ನೇ ವಿಧಿಯ ಅಡಿಯಲ್ಲಿ ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಲು ಕರ್ನಾಟಕದ ರಾಜ್ಯಪಾಲರಿಗೆ ಸಲ್ಲಿಸಲು ಸಿದ್ಧಪಡಿಸಲಾಗಿದೆ.

2. 2015–20ರ ಅವಧಿಯನ್ನು ಒಳಗೊಂಡಿರುವ ಮತ್ತು ಮಾರ್ಚ್ 2021ರವರೆಗೆ ಇಂದೀಕರಿಸಲಾದ ಈ ವರದಿಯು ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆ ಖಜಾನೆ-2 ಮೇಲಿನ ಕಾರ್ಯಕ್ಷಮತೆ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

3. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

4. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

ರಾಜ್ಯ ಸರ್ಕಾರವು 2001ರಲ್ಲಿ ರಾಜ್ಯದಲ್ಲಿನ ಖಜಾನೆಗಳನ್ನು ಸ್ವಯಂಚಾಲಿತಗೊಳಿಸಲು ಖಜಾನೆ ಗಣಕೀಕರಣ ಯೋಜನೆ 'ಖಜಾನೆಯನ್ನು (ಕೆ1)' ಅನುಷ್ಠಾನಗೊಳಿಸಿತು. ರಾಜ್ಯ ಸರ್ಕಾರವು 2009ರಲ್ಲಿ ಅಸ್ತಿತ್ವದಲ್ಲಿದ್ದ ಕೆ1 ವ್ಯವಸ್ಥೆಯನ್ನು ಖಜಾನೆ–2 (ಕೆ2) ಎಂಬ ಹೊಸ ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆಯೊಂದಿಗೆ ಬದಲಿಸಲು ಕ್ರಮ ಕೈಗೊಂಡಿತು. ಕೆ2 ಅಪ್ಲಿಕೇಶನ್ ಅನ್ನು ಮಾನವಚಾಲಿತ ಸಂವಹನಗಳಿಲ್ಲದೆ ನೇರವಾಗಿ ಸಿಸ್ಟಮ್–ಟು–ಸಿಸ್ಟಮ್ ಮಾಹಿತಿ ವಿನಿಮಯವನ್ನು ಸಕ್ರಿಯಗೊಳಿಸಲು ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳನ್ನು ಸಮಗ್ರ ವ್ಯವಸ್ಥೆಯಲ್ಲಿ ತರಲು ಯೋಜಿಸಲಾಗಿತ್ತು. ಕೆ2 ತನ್ನ ವ್ಯಾಪ್ತಿಯನ್ನು ನಾಗರಿಕರಿಗೆ ವಿಸ್ತರಿಸಲು ಮತ್ತು ಸರ್ಕಾರದ ಜಮೆಗಳ ಪ್ರಕ್ರಿಯೆಗಳನ್ನು ಸರಳಗೊಳಿಸುವ ಮತ್ತು ವ್ಯವಸ್ಥಿತಗೊಳಿಸಲು ಸಹ ಪ್ರಸ್ತಾಪಿಸಿತ್ತು. ಉನ್ನತೀಕರಣ, ಏಕೀಕರಣ ಮತ್ತು ವ್ಯವಹಾರ ಪ್ರಕ್ರಿಯೆ ಮರುಸಂಯೋಜನೆ, ಮಾಹಿತಿ ವ್ಯವಸ್ಥೆಯ ನಿಯಂತ್ರಣಗಳು ಸೇರಿದಂತೆ ಕೆ2ವಿನಲ್ಲಿನ ಭದ್ರತಾ ನಿಯಂತ್ರಣಗಳು, ಸ್ವತ್ತುಗಳನ್ನು ರಕ್ಷಿಸುವುದು, ದತ್ತಾಂಶ ಸಮಗ್ರತೆ ಮತ್ತು ಭದ್ರತೆ ಹಾಗೂ ಸರ್ಕಾರದ ಹಣಕಾಸಿನ ಕಾರ್ಯಾಚರಣೆಗಳ ಪರಿಣಾಮಕಾರಿತ್ವ ಮತ್ತು ದಕ್ಷತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಅಡೆತಡೆಯಿಲ್ಲದ ಖಜಾನೆ ಕಾರ್ಯಾಚರಣೆಯ ಯೋಜಿತ ಉದ್ದೇಶಗಳನ್ನು ಕೆ2 ಸಾಧಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಪ್ರಯತ್ನಿಸಿತು. ಕೆ2 ಅಪ್ಲಿಕೇಶನ್ 24 ಮಾಡ್ಯೂಲ್‌ಗಳನ್ನು ಒಳಗೊಂಡಿದೆ ಮತ್ತು ಅದನ್ನು ಎರಡು ಹಂತಗಳಲ್ಲಿ ಕಾರ್ಯಗತಗೊಳಿಸಲು ಪ್ರಸ್ತಾಪಿಸಲಾಗಿದೆ: ಹಂತ–1, ಕೆ1 ಸಾಮರ್ಥ್ಯಗಳನ್ನು ಸಾಧಿಸಲು 13 ಮಾಡ್ಯೂಲ್‌ಗಳನ್ನು ಒಳಗೊಂಡಿದೆ ಮತ್ತು ಹಂತ–2, ಕೆ2ವಿನಲ್ಲಿ ಯೋಜಿಸಲಾದ ಹೆಚ್ಚುವರಿ ಸಾಮರ್ಥ್ಯಗಳನ್ನು ಒದಗಿಸಲು 11 ಮಾಡ್ಯೂಲ್‌ಗಳನ್ನು ಒಳಗೊಂಡಿದೆ. ಕೆ1 ದತ್ತಾಂಶದ ಸಂಪೂರ್ಣ ವರ್ಗಾವಣೆ, ಮೂರನೇ ವ್ಯಕ್ತಿಯಿಂದ ಸೂಕ್ತ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ, ಭದ್ರತಾ ಪರಿಶೋಧನೆ ಮತ್ತು "ಗೋ–ಲೈವ್" ಘೋಷಣೆಯ ನಂತರ ಫೆಬ್ರವರಿ 2013ರೊಳಗೆ ಎರಡೂ ಹಂತಗಳನ್ನು ಕಾರ್ಯಾರಂಭಗೊಳಿಸಲು ಉದ್ದೇಶಿಸಲಾಗಿತ್ತು.

ಇಲಾಖೆಯು ವ್ಯವಹಾರ ಪ್ರಕ್ರಿಯೆ ಮರುಇಂಜಿನಿಯರಿಂಗ್ ಚಟುವಟಿಕೆ ಕೈಗೊಂಡಿಲ್ಲ. ಆರ್ಥಿಕ ಸಂಹಿತೆಗಳ ಪರಿಷ್ಕರಣೆಯನ್ನು ಪೂರ್ವಸಿದ್ಧತಾ ಚಟುವಟಿಕೆಯಾಗಿ ಕಲ್ಪಿಸಲಾಗಿದ್ದರೂ ಸಹ ಅದು ಇನ್ನೂ ಪೂರ್ಣಗೊಂಡಿಲ್ಲ.

**(ಕಂಡಿಕೆ 2.3.1)**

ಸಂಬಂಧಿತ ವ್ಯವಹಾರ ನಿಯಮಗಳನ್ನು ಅಪ್ಲಿಕೇಶನ್‌ನ ಭಾಗವಾಗಿ ಮಾಡದ ಕಾರಣ ಭಾರತೀಯ ಸರ್ಕಾರಿ ಲೆಕ್ಕಪತ್ರ ಮಾನದಂಡಗಳ ಅನುಷ್ಠಾನವನ್ನು ಬೆಂಬಲಿಸುವ ಸಾಮರ್ಥ್ಯವು ಸೀಮಿತವಾಗಿತ್ತು.

**(ಕಂಡಿಕೆ 2.3.2)**

ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯನ್ನು ಮೇಲ್ವಿಚಾರಣೆ ಮಾಡುವ ಯಾವುದೇ ನಿಬಂಧನೆ ಇಲ್ಲದ ಕಾರಣ ಸಹಾಯಾನುದಾನದ ಬಿಲ್‌ಗಳ ಮೇಲೆ ಸೆಳೆದ ಹಣದ ಜಾಡು ಹಿಡಿಯಲು ಸಾಧ್ಯವಾಗಲಿಲ್ಲ.

**(ಕಂಡಿಕೆ 2.3.3)**

ಸಮಯಾವಕಾಶದ ವಿಸ್ತರಣೆಗೆ ಹೊಂದಾಣಿಕೆಯಾಗುವಂತೆ ಒಪ್ಪಂದವನ್ನು ಪರಿಷ್ಕರಿಸಲಾಗಿಲ್ಲ. ಕಾರ್ಯಾಚರಣೆ ಮತ್ತು ನಿರ್ವಹಣಾ ಹಂತದ ಮೊದಲು ಎಲ್ಲಾ ಮಾಡ್ಯೂಲ್‌ಗಳು ಸಂಪೂರ್ಣವಾಗಿ ಕಾರ್ಯಾಚರಣೆ ಆರಂಭಿಸಿದ ನಂತರವಷ್ಟೇ 'ಗೋ-ಲೈವ್' ಘೋಷಣೆ ಮಾಡಲು ಒಪ್ಪಂದವು ಕಲ್ಪಿಸಿತ್ತಾದರೂ, ' ಗೋ-ಲೈವ್ ' ಘೋಷಣೆ ಸಾಧ್ಯವಾಗಲಿಲ್ಲ.

**(ಕಂಡಿಕೆ 2.5)**

ಅಭಿವೃದ್ಧಿಯು ವಿಳಂಬವಾಯಿತು, ಮಾಡ್ಯೂಲ್‌ಗಳನ್ನು ಭಾಗಶಃ ಕಾರ್ಯಾರಂಭಿಸಲಾಯಿತು ಮತ್ತು ಒಪ್ಪಂದವನ್ನು ಮಾರ್ಪಡಿಸದೆಯೇ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಸಮಕಾಲೀನವಾಗಿ ಕೈಗೊಳ್ಳಲಾಯಿತು. ಮಾಡ್ಯೂಲ್‌ಗಳ ಅಭಿವೃದ್ಧಿ ಮತ್ತು ಕಾರ್ಯಾಚರಣೆಯ ವಿಳಂಬವನ್ನು ಪರಿಗಣಿಸದೆಯೇ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ವಿಸ್ತರಿಸಲಾಯಿತು. ಇಲಾಖೆಯು ಕನಿಷ್ಠ ಎರಡು ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿಯನ್ನು ಕಳೆದುಕೊಂಡಿತು ಮತ್ತು ಹೆಚ್ಚುವರಿಯಾಗಿ ₹38.75 ಕೋಟಿ ಆರ್ಥಿಕ ಬದ್ಧತೆಯನ್ನು ಹೊಂದಿತು.

**(ಕಂಡಿಕೆ 2.6.5)**

ಅಪ್ಲಿಕೇಶನ್‌ನ ಆಂತರಿಕ ರಚನಾವಿನ್ಯಾಸವನ್ನು ಅರ್ಥಮಾಡಿಕೊಳ್ಳುವಲ್ಲಿ ನಿರ್ಣಾಯಕವಾಗಿರುವ ಅಪ್ಲಿಕೇಶನ್‌ನ ಸೋರ್ಸ್ ಕೋಡ್ ಮತ್ತು ವಿವರವಾದ ದತ್ತಾಂಶದ ನಿಘಂಟನ್ನು ಇಲಾಖೆಯು ತನ್ನ ಸುಪರ್ದಿಗೆ ಪಡೆದಿಲ್ಲ.

**(ಕಂಡಿಕೆ 2.6.8)**

ರಾಜ್ಯ ಸರ್ಕಾರವು ತನ್ನದೇ ಹೂಡಿಕೆಯಿಂದ ಅಭಿವೃದ್ಧಿಪಡಿಸಿದ ಪ್ರಮುಖ ಸ್ವತ್ತಾದ ಕೆ2 ಅಪ್ಲಿಕೇಶನ್‌ನ ಮೇಲೆ ಸಾಕಷ್ಟು ಕಾರ್ಯತಂತ್ರದ ನಿಯಂತ್ರಣವನ್ನು ಹೊಂದಿರಲಿಲ್ಲವಾದ ಕಾರಣ, ಕಾರ್ಯಾಚರಣೆಗಳ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ತಾಂತ್ರಿಕ ಸಂಯೋಜಕರ ಮೇಲೆ ಅದರ ನಿರಂತರ ಅವಲಂಬನೆಯಲ್ಲಿ ಪರಿಣಮಿಸಿತು. ತಾಂತ್ರಿಕ ಸಂಯೋಜಕರ ಸ್ವಾಮ್ಯದ ಕಾರ್ಯವಿನ್ಯಾಸದ ಆಧಾರದಲ್ಲಿ ಕೆ2ವನ್ನು ಅನುಷ್ಠಾನಗೊಳಿಸಲಾಗಿದೆ ಎಂಬುದು ಕಂಡುಬಂದಿತು. ಗುತ್ತಿಗೆದಾರರ ಹಿಡಿತ ತಪ್ಪಿಸುವಲ್ಲಿ ಯೋಜನೆಯ ಸಿದ್ಧತೆಯು ಅಸಮರ್ಪಕವಾಗಿತ್ತು. ಸ್ವಾಮ್ಯದ ಸಾಫ್ಟ್‌ವೇರ್‌ನ ಅವಲಂಬನೆಯನ್ನು ಅಂದಾಜಿಸಲಾಗಿಲ್ಲ ಮತ್ತು ಪರಿಹಾರಿಕ ಕ್ರಮಗಳನ್ನು ಕೈಗೊಂಡಿಲ್ಲ.

**(ಕಂಡಿಕೆ 2.6.9)**

ಕೆ2 ಅನುಷ್ಠಾನವು ಸಾಫ್ಟ್‌ವೇರ್ ಒಪ್ಪಂದ ನಿರ್ವಹಣಾ ಅಭ್ಯಾಸಗಳಲ್ಲಿನ ನ್ಯೂನತೆಗಳಿಂದ ಬಾಧಿತವಾಗಿತ್ತು. ವಾಟರ್‌ಫಾಲ್ ಮಾದರಿಯನ್ನು ಅಳವಡಿಸಿಕೊಂಡು ನಿರ್ದಿಷ್ಟ ಮೈಲಿಗಲ್ಲುಗಳೊಂದಿಗೆ ಅಪ್ಲಿಕೇಶನ್ ಸಿದ್ಧಪಡಿಸಿ ಎರಡು ಹಂತಗಳಲ್ಲಿ ಒದಗಿಸಲು ಮೂಲತಃ ಮಾಸ್ಟರ್ ಸೇವಾ ಒಪ್ಪಂದದಲ್ಲಿ ಯೋಜಿಸಿತ್ತಾದರೂ, ಯೋಜನೆಯು ಯೋಜಿತ ಅಭಿವೃದ್ಧಿ ಮಾದರಿ ಮತ್ತು ಸಮಯಾವಧಿ ವೇಳಾಪಟ್ಟಿಗಳಿಂದ ಸಂಪೂರ್ಣ ವಿಮುಖವಾಗಿ ಒಪ್ಪಂದವನ್ನು ಅನಗತ್ಯ ವಿಳಂಬವಾಗಿಸಿತು.

**(ಕಂಡಿಕೆ 2.7.1)**

ಮೂರನೇ ವ್ಯಕ್ತಿಯ ಪರಿಶೋಧನೆ ಮತ್ತು ಭದ್ರತಾ ಪರಿಶೋಧನೆಯಂತಹ ಪ್ರಮುಖ ಸಾಫ್ಟ್‌ವೇರ್ ಗುಣಮಟ್ಟದ ಭರವಸೆ ಪ್ರಕ್ರಿಯೆಗಳನ್ನು ಅನುಷ್ಠಾನಗೊಳಿಸಲಾಗಿಲ್ಲ. ಇಲಾಖೆಯು ಮಾಡ್ಯೂಲ್‌ಗಳನ್ನು ಮತ್ತು ಅವುಗಳ ಇಂದೀಕರಣಗಳನ್ನು ಮೂರನೇ ವ್ಯಕ್ತಿಯ ಪರಿಶೋಧನೆ ಮತ್ತು ಭದ್ರತಾ ಪರಿಶೋಧನೆಗೆ ಒಳಪಡಿಸದೆಯೇ ನಿಯೋಜಿಸಿತ್ತು.

**(ಕಂಡಿಕೆ 2.7.3)**

ನಿರಂತರವಾಗಿ ಕಾರ್ಯಾಚರಣೆಗಳನ್ನು ಮೇಲ್ವಿಚಾರಣೆ ಮಾಡಲು ಇಲಾಖೆಗೆ ಸಹಾಯ ಮಾಡಲು ಅನುವಾಗಬೇಕಿದ್ದ ಇಎಮ್ಎಸ್ ಮತ್ತು ಎಸ್ಎಲ್ಎ ಮೇಲ್ವಿಚಾರಣೆ ಪರಿಕರಗಳನ್ನು ತಾಂತ್ರಿಕ ಸಂಯೋಜಕರು ಅಳವಡಿಸಿರಲಿಲ್ಲ. ಹಾಗಾಗಿ, ತಾಂತ್ರಿಕ ಸಂಯೋಜಕರು ನೀಡಿದ ಸೇವೆಯ ಗುಣಮಟ್ಟವನ್ನು ಅಳೆಯಲು ಸಾಧ್ಯವಾಗುವುದಿಲ್ಲ.

**(ಕಂಡಿಕೆ 2.7.4)**

ಕೆ2ವಿನ ಕ್ರಿಯಾವಿನ್ಯಾಸ ಮತ್ತು ದತ್ತಸಂಚಯಕ್ಕೆ ಸಂಬಂಧಿಸಿದಂತೆ ಯಾವುದೇ ಜ್ಞಾನ ವರ್ಗಾವಣೆಯನ್ನು ಕೆ2 ಪಡೆಯಲಿಲ್ಲ. ಅಪ್ಲಿಕೇಶನ್, ದತ್ತಸಂಚಯ ಮತ್ತು ಭದ್ರತೆ ಕ್ಷೇತ್ರಗಳಲ್ಲಿ ತಾಂತ್ರಿಕ ಸಂಯೋಜಕರೊಂದಿಗೆ ಸಮನ್ವಯ ಸಾಧಿಸಲು ಯೋಜಿಸಲಾಗಿದ್ದ ತಜ್ಞರ ತಂಡವನ್ನು ಸರ್ಕಾರ ನಿಯೋಜಿಸಿಲ್ಲ.

**(ಕಂಡಿಕೆ 2.7.5)**

ಫೆಬ್ರವರಿ 2013ರ ವೇಳೆಗೆ ಯೋಜನೆಯನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಎಲ್ಲಾ ಪ್ರಕಾರಗಳಲ್ಲಿ ಕಾರ್ಯಾರಂಭಿಸಲಾಗುವುದು ಎಂದು ನಿರೀಕ್ಷಿಸಲಾಗಿತ್ತಾದರೂ, ಮಾರ್ಚ್ 2021ರ ವೇಳೆಗೂ ಅದು ಪೂರ್ಣಗೊಂಡಿಲ್ಲ. ಮಾಡ್ಯೂಲ್‌ಗಳ ಮೊದಲ ಕಂತನ್ನು ಸೆಪ್ಟೆಂಬರ್ 2015ರಲ್ಲಿ ಮಾತ್ರವೇ ಕಾರ್ಯಾರಂಭಿಸಲಾಯಿತು. ಪ್ರಸ್ತುತ 22 ಮಾಡ್ಯೂಲ್‌ಗಳ ಅಭಿವೃದ್ಧಿ ಪೂರ್ಣಗೊಂಡಿದೆ ಎಂಬುದನ್ನು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಗಮನಿಸಿದೆ (ಹಂತ–1ರ 13 ಮಾಡ್ಯೂಲ್‌ಗಳು ಮತ್ತು ಹಂತ–2ರ 9 ಮಾಡ್ಯೂಲ್‌ಗಳು). ಅನುಷ್ಠಾನಗೊಳಿಸಲಾದ ಹಂತ–2ರ ಒಂಬತ್ತು ಮಾಡ್ಯೂಲ್‌ಗಳಲ್ಲಿ ಆರು ಬಳಕೆಯಲ್ಲಿಲ್ಲ. ಇದರ ಪರಿಣಾಮವಾಗಿ, ಕೆ2 ಯೋಜನೆಯು ಅದರ ಪರಿಕಲ್ಪನೆಯ ಒಂದು ದಶಕಕ್ಕೂ ಹೆಚ್ಚು ಸಮಯದ ನಂತರವೂ, ಎಲ್ಲಾ ಯೋಜಿತ ಉದ್ದೇಶಗಳನ್ನು ಮತ್ತು ನಿರೀಕ್ಷಿತ ಅಂತಿಮ ಫಲಿತಾಂಶಗಳನ್ನು ಸಾಧಿಸಲು ಇನ್ನೂ ಸಾಧ್ಯವಾಗಿಲ್ಲ.

**(ಕಂಡಿಕೆಗಳು 3.1.1)**

ಆಯವ್ಯಯ ತಯಾರಿಕೆ, ವೆಚ್ಚದ ಜಾಡು ಹಿಡಿಯುವಿಕೆ, ನಗದು ನಿರ್ವಹಣೆ, ಸರ್ಕಾರಿ ಸಾಲ ಮತ್ತು ಖಾತರಿಗಳ ನಿರ್ವಹಣೆ, ಹಣಕಾಸು ಸ್ವತ್ತುಗಳ ನಿರ್ವಹಣೆಯ ಕಾರ್ಯಗಳನ್ನು ಒಳಗೊಂಡಿರುವ ಕೆ2 ಅನುಷ್ಠಾನವು ಮಾರ್ಚ್ 2021ರ ವೇಳೆಗೂ ಅಪೂರ್ಣವಾಗಿದ್ದು, ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆಯ ನಿರೀಕ್ಷೆಗಳನ್ನು ಪೂರೈಸುವಲ್ಲಿನ ಅದರ ಸಾಮರ್ಥ್ಯದ ಮೇಲೆ ದುಷ್ಪರಿಣಾಮ ಉಂಟಾಗಿದೆ. ವೆಚ್ಚದ ಜಾಡು ಹಿಡಯುವುದಕ್ಕಾಗಿನ ಮಾಡ್ಯೂಲ್ ಇನ್ನೂ ಕಾರ್ಯಾರಂಭ ಮಾಡಿರದ ಕಾರಣ ವರ್ಷಾಂತರಗಳಲ್ಲಿ ವೆಚ್ಚದ ಜಾಡು ಹಿಡಿಯುವ ಸಾಮರ್ಥ್ಯವನ್ನು ಗಳಿಸಲು ಕೆ2ವಿಗೆ ಇನ್ನೂ ಸಾಧ್ಯವಾಗಿಲ್ಲ.

**(ಕಂಡಿಕೆ 3.1.3)**

ಏಕೀಕರಣವು ಯೋಜನೆಯ ಪ್ರಮುಖ ಅಂಶವಾಗಿದ್ದರೂ, ಅದರ ಅನುಷ್ಠಾನದ ಕಾರ್ಯತಂತ್ರ ಮತ್ತು ಸಮಯಾವಧಿಯನ್ನು ನಿರ್ದಿಷ್ಟಪಡಿಸಲಾಗಿರಲಿಲ್ಲ. ಇದರ ಪರಿಣಾಮವಾಗಿ, ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆಯನ್ನು ,ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ ಇವುಗಳೊಂದಿಗಿನ ಏಕೀಕರಣದ ಅನುಷ್ಠಾನವು ಭಾಗಶಃ/ವಿಳಂಬವಾಯಿತಲ್ಲದೆ, ಮಹಾಲೇಖಾಪಾಲರು ಮತ್ತು ಯೋಜನಾ ಇಲಾಖೆಗಳೊಂದಿಗೆ ಏಕೀಕರಣವಾಗಿಲ್ಲ. ದೈನಂದಿನ ಲೆಕ್ಕಪತ್ರಗಳನ್ನು ತಯಾರಿಸಲು ಕೆ2ವಿಗೆ ಇನ್ನೂ ನಿರೀಕ್ಷಿತ ಸಾಮರ್ಥ್ಯವನ್ನು ಸಾಧಿಸಲಾಗಿಲ್ಲ.

**(ಕಂಡಿಕೆಗಳು 3.2.1 ಮತ್ತು 3.2.2)**

ವಹಿವಾಟಿನ ಮಟ್ಟದ ಖಜಾನೆ ಪ್ರಕ್ರಿಯೆಗಳನ್ನು ಡಿಜಿಟಲೀಕರಣಗೊಳಿಸುವಲ್ಲಿ ಮತ್ತು ಹಣಕಾಸಿನ ದತ್ತಾಂಶವನ್ನು ದಾಖಲಿಸುವಲ್ಲಿ ಯೋಜನೆಯು ಯಶಸ್ವಿಯಾಗಿದ್ದರೂ, ವಿಶ್ಲೇಷಣಾತ್ಮಕ ಒಳನೋಟಗಳನ್ನು ಪಡೆಯಲು ಸಂಗ್ರಹಿತ ದತ್ತಾಂಶವನ್ನು ಬಳಸದ ಕಾರಣ ಅವುಗಳ ಮೌಲ್ಯವನ್ನು ಅರಿಯಲು ಮತ್ತು ಸಂಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ.

**(ಕಂಡಿಕೆ 3.3)**

ಯೋಜನೆಯನ್ನು ಸಂಪೂರ್ಣ ಪ್ಯಾಕೇಜ್‌ನಂತೆ ಪ್ರಾರಂಭಿಸುವ ಬದಲು, 2015 ರಿಂದ 2021ರವರೆಗಿನ ದೀರ್ಘಾವಧಿಯಲ್ಲಿ ಕಂತು ಕಂತಾಗಿ ಕಾರ್ಯಾರಂಭಿಸಲಾಯಿತು. ಇದು ಕೆ1ನಿಂದ ಕೆ2 ಅಪ್ಲಿಕೇಶನ್‌ಗೆ ಬದಲಾವಣೆಯ ಮೇಲೆ ಪರಿಣಾಮ ಬೀರಿತು ಮತ್ತು ಯಾವುದೇ ಪರಸ್ಪರ ಸಂಪರ್ಕವಿಲ್ಲದ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಹಣಕಾಸಿನ ದತ್ತಾಂಶವನ್ನು ದಾಖಲಿಸುವಲ್ಲಿ ಪರಿಣಮಿಸಿತಾದ್ದರಿಂದ ಸಮಗ್ರ ಆರ್ಥಿಕ ಮಾಹಿತಿಯನ್ನು ಒದಗಿಸುವಲ್ಲಿ ಕೆ2ವಿನ ಸಾಮರ್ಥ್ಯವನ್ನು ಸೀಮಿತಗೊಳಿಸಿದಂತಾಯಿತು. ಯೋಜನೆಯು ಸಂಕಲ್ಪಿತ ವ್ಯವಹಾರ ಪ್ರಕ್ರಿಯೆಗಳನ್ನು ಕೆ2ವಿನಲ್ಲಿ ಇನ್ನೂ ಕಾರ್ಯಗತಗೊಳಿಸಬೇಕಾಗಿದೆ ಮತ್ತು ತತ್ಪರಿಣಾಮವಾಗಿ, ಹಲವಾರು ವ್ಯವಹಾರ ಪ್ರಕ್ರಿಯೆಗಳು ಇನ್ನೂ ಕೆ2 ಅಪ್ಲಿಕೇಶನ್ನಿನ ಹೊರಗೆ ಉಳಿದಿವೆ.

**(ಕಂಡಿಕೆ 3.3.2)**

ಸ್ವೀಕರ್ತನ ರಶೀದಿ ಬಿಲ್‌ಗಳ ಮೇಲೆ ಅನುದಾನವನ್ನು ಸೆಳೆಯಲಾಗುತ್ತಿರುವುದರಿಂದ ಆ ಅನುದಾನಗಳ ಬಳಕೆಯನ್ನು ಮೇಲ್ವಿಚಾರಣೆ ಮಾಡುವಲ್ಲಿ ತೊಡಕುಂಟಾಗಿದೆ.

**(ಕಂಡಿಕೆ 3.6.3)**

ವಿಶ್ವಾಸಾರ್ಹ ಮಂಜೂರಾತಿ ಆದೇಶವನ್ನು ಹೊಂದಿಲ್ಲದಿರುವುದು ಮತ್ತು ಉಪ-ವೋಚರ್ ಮಾಹಿತಿಯನ್ನು ಉಲ್ಲೇಖಿಸಲು ಮತ್ತು ಜಾಡು ಹಿಡಿಯಲು ಭೌತಿಕ ದಾಖಲೆಗಳ ಮೇಲೆ ನಿರಂತರ ಅವಲಂಬನೆಯನ್ನು ಸೃಷ್ಟಿಸಿತ್ತಾದ್ದರಿಂದ ಕೆ2 ದಾಖಲಿಸಿದ ವೋಚರ್ ಮಾಹಿತಿಯು ಅಪೂರ್ಣವಾಗಿದೆ. ಭೌತಿಕ ಮಂಜೂರಾತಿ ಆದೇಶಗಳು ಮತ್ತು ಭೌತಿಕ ಉಪ-ವೋಚರ್‌ಗಳನ್ನು ಅಪ್‌ಲೋಡ್ ಮಾಡಲು ಯಾವುದೇ ಸೌಲಭ್ಯವಿಲ್ಲವಾದ್ದರಿಂದ, ವೋಚರ್ ದತ್ತಾಂಶದ ಉಲ್ಲೇಖದ ಮೇಲೆ ಪರಿಣಾಮ ಬೀರುವಂತಾಗಿದೆ.

**(ಕಂಡಿಕೆ 3.6.10)**

ಪರೀಕ್ಷಾ-ತನಿಖೆಗಾಗಿ ಆಯ್ಕೆ ಮಾಡಿದ ಮಾಡ್ಯೂಲ್‌ಗಳಿಗೆ ಸಂಬಂಧಿಸಿದಂತೆ ಹಣದ ಹೆಚ್ಚುವರಿ ಬಿಡುಗಡೆಗೆ ಕಾರಣವಾಗುವ ದುರ್ಬಲ ಅಪ್ಲಿಕೇಶನ್ ನಿಯಂತ್ರಣಗಳ ಪ್ರಕರಣಗಳು, ಎರಡು ಬಾರಿ ಪಾವತಿಯಾದ ಸಾಮಾನ್ಯ ಭವಿಷ್ಯ ನಿಧಿ (ಜಿಪಿಎಫ್) ಬಿಲ್‌ಗಳು, ಎರಡು ಬಾರಿ ಪಾವತಿಯಾದ ಮರುಪಾವತಿ ಬಿಲ್‌ಗಳು, ಉದ್ಯೋಗಿಗಳ ನಿವೃತ್ತಿಯ ನಂತರವೂ ಸಂಬಳವನ್ನು ಮುಂದುವರಿಸುವುದು ಇತ್ಯಾದಿ ಪ್ರಕರಣಗಳನ್ನು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು.

**(ಕಂಡಿಕೆಗಳು 3.5.5, 3.6.4 ಮತ್ತು 3.8.1)**

ಕೆ2ವಿನಲ್ಲಿ ಅಪೂರ್ಣ ನಿರ್ವಹಣಾ ಮಾಹಿತಿ ಸುವ್ಯವಸ್ಥೆ (ಎಮ್‌ಐಎಸ್) ವರದಿಗಳು ಮತ್ತು ಅಭಿವೃದ್ಧಿಪಡಿಸಿದ ಎಮ್‌ಐಎಸ್ ವರದಿಗಳಲ್ಲಿ ನ್ಯೂನತೆಗಳಿರುವುದನ್ನು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು.

**(ಕಂಡಿಕೆ 3.11)**

ಮಾಹಿತಿ ತಂತ್ರಜ್ಞಾನ ಕಾಯಿದೆ, 2000 ಮತ್ತು ಅದರ ಅಡಿಯಲ್ಲಿನ ನಿಯಮಗಳ ಅನುಸಾರ, ಕನಿಷ್ಠ ವರ್ಷಕ್ಕೊಮ್ಮೆ ಅಥವಾ ಮೂಲಭೂತ ಸೌಕರ್ಯಗಳಲ್ಲಿ ಗಮನಾರ್ಹ ಉನ್ನತೀಕರಣವು ಸಂಭವಿಸಿದಾಗ ಕೇಂದ್ರ ಸರ್ಕಾರದಿಂದ ಅನುಮೋದಿಸಲ್ಪಟ್ಟ ಸ್ವತಂತ್ರ ಲೆಕ್ಕಪರಿಶೋಧಕರಿಂದ ಭದ್ರತಾ ಪರಿಶೋಧನೆಯನ್ನು ನಡೆಸುವುದು ಅಗತ್ಯವಿರುತ್ತದೆ. ಕೆ2 ಸೂಕ್ಷ್ಮ ಹಣಕಾಸು ಮಾಹಿತಿಗಳನ್ನು ಸಂಸ್ಕರಿಸುತ್ತದೆ ಮತ್ತು ಯಾವುದೇ ಭದ್ರತಾ ಲೋಪಗಳು ಹಣಕಾಸಿನ ಸ್ವತ್ತುಗಳ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡುತ್ತವೆ ಮತ್ತು ಸರ್ಕಾರದ ಪ್ರತಿಷ್ಠೆಗೂ ಹಾನಿಯನ್ನು ಉಂಟುಮಾಡಬಹುದು. ಅಪ್ಲಿಕೇಶನ್, ನೆಟ್‌ವರ್ಕ್ ಘಟಕಗಳು ಇವುಗಳನ್ನು ವ್ಯಾಪಿಸಿದಂತೆ ಮೂರನೇ ವ್ಯಕ್ತಿಯಿಂದ ಕೆ2ವಿನ ಭದ್ರತಾ ಪರಿಶೋಧನೆಯನ್ನು ನಿಯತಕಾಲಿಕವಾಗಿ ನಡೆಸಲಾಗಿಲ್ಲ ಮತ್ತು ಪರಿಶೋಧನೆಯ ವ್ಯಾಪ್ತಿಯು ಸಮಗ್ರವಾಗಿಲ್ಲ ಎಂಬುದನ್ನು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಭದ್ರತಾ ಲೆಕ್ಕಪರಿಶೋಧನೆಯ ಆವರ್ತಕತೆ ಮತ್ತು ವ್ಯಾಪ್ತಿಯು ಸಾಕಷ್ಟಿಲ್ಲದ ಕಾರಣ, ಕೆ2 ಅಪ್ಲಿಕೇಶನ್‌ನಲ್ಲಿ ಭದ್ರತಾ ನಿಯಂತ್ರಣಗಳ ದೃಢತೆಯ ಮೇಲೆ ಭರವಸೆಯನ್ನು ಪಡೆಯಲು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

**(ಕಂಡಿಕೆ 4.1.2)**

ಸ್ವೀಕರಿಸುವವರು, ಉಪ–ವೋಚರ್ ಮಾಹಿತಿಯಂತಹ ವೋಚರ್ ದತ್ತಾಂಶಗಳನ್ನು ಡಿಜಿಟಲ್ ಸಹಿಯ ವ್ಯಾಪ್ತಿಯಿಂದ ಹೊರತಾಗಿಸಿದ ಕಾರಣ ದೃಢೀಕರಣ ಮತ್ತು ನಿರಾಕರಣೆ ತಪ್ಪಿಸುವ ನಿರ್ಣಾಯಕ ಅಂಶವಾದ ಡಿಜಿಟಲ್ ಸಹಿ ಪ್ರಮಾಣಪತ್ರ (ಡಿಎಸ್‌ಸಿ) ಅನುಷ್ಠಾನದಲ್ಲಿ ಕೊರತೆಯಿತ್ತು ಎಂಬುದನ್ನು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಲಿಪೀಕರಣ ಮತ್ತು ಡಿಜಿಟಲ್ ಸಹಿಯೊಂದಿಗೆ ಆನ್‌ಲೈನ್ ದತ್ತಾಂಶದ ವಿನಿಮಯವನ್ನು ಪರಿಚಯಿಸಲಾಗಿದ್ದರೂ, ನಿರಾಕರಣೆ ತಪ್ಪಿಸುವ ವ್ಯವಸ್ಥೆಯನ್ನು ಸ್ಥಾಪಿಸುವ ಕಾರ್ಯವಿಧಾನಗಳು ಜಾರಿಯಲ್ಲಿಲ್ಲ. ಡಿಜಿಟಲ್ ಸಹಿ ಪ್ರಕ್ರಿಯೆಯ ಒಟ್ಟಾರೆ ವಿಶ್ವಾಸಾರ್ಹತೆಯ ಮೇಲೆ ಪರಿಣಾಮ ಬೀರುವ ಡಿಜಿಟಲ್ ಸಹಿಗಳಿಲ್ಲದ ವಹಿವಾಟುಗಳ ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**(ಕಂಡಿಕೆ 4.2.2.3)**

ಪಾಸ್‌ವರ್ಡ್ ದುರ್ಬಲತೆಗಳನ್ನು ಬಳಸಿಕೊಂಡು ಆಡಳಿತಾತ್ಮಕ ಮಟ್ಟದ ಸವಲತ್ತುಗಳನ್ನು ಪಡೆಯುವ ದುರ್ಬಲತೆಗಳನ್ನು, ಖಜಾನೆ ನೆಟ್‌ವರ್ಕ್‌ನಲ್ಲಿನ ನಿರ್ಬಂಧಗಳ ಉಲ್ಲಂಘನೆ, ಬಿಲ್ ಸಂಸ್ಕರಣೆಯಲ್ಲಿ ಹಸ್ತಕ್ಷೇಪದಂತಹ ದುರ್ಬಲತೆಗಳು ಮುಂತಾದ ಸಾಧ್ಯತೆಗಳನ್ನು ಲೆಕ್ಕಪರಿಶೋಧನೆಯು ಪ್ರದರ್ಶಿಸಿ ತೋರಿಸಿತು. ಅಪ್ಲಿಕೇಶನ್‌ನಲ್ಲಿ ಗಮನಿಸಲಾದ ಭದ್ರತಾ ದುರ್ಬಲತೆಗಳು ಸೂಕ್ಷ್ಮ ಹಣಕಾಸಿನ ಮಾಹಿತಿಯನ್ನು ಸೂಕ್ತವಲ್ಲದವರಿಗೆ ಒದಗಿಸುವ ಮತ್ತು ದುರುಪಯೋಗಕ್ಕೆ ಒಡ್ಡುವ ಸಂಭಾವ್ಯತೆಯನ್ನು ಹೊಂದಿವೆಯಾದ್ದರಿಂದ, ಮಾಹಿತಿಯ ಗೌಪ್ಯತೆ ಮತ್ತು ಸಮಗ್ರತೆಯನ್ನು ರಾಜಿ ಮಾಡಿಕೊಳ್ಳುವ ಅಪಾಯವನ್ನು ಎದುರಿಸುತ್ತವೆ.

**(ಕಂಡಿಕೆ 4.8.3)**

ಯೋಜನೆಯ ಅನುಷ್ಠಾನದ ನಿರ್ಣಾಯಕ ಅವಧಿಯಲ್ಲಿ ಅಧಿಕಾರಸ್ಥ ಸಮಿತಿಯು ಯೋಜನೆಯ ನಿಯತಕಾಲಿಕ ಪರಿಶೀಲನೆ ಕೈಗೊಳ್ಳದಿರುವುದರಿಂದಾಗಿ ಸರ್ಕಾರದ ಮಟ್ಟದಲ್ಲಿ ಯೋಜನೆಯ ಮೇಲ್ವಿಚಾರಣೆಯು ಬಲಹೀನವಾಗಿದೆ.

**(ಕಂಡಿಕೆ 5.1)**

ವಿವಿಧ ಪ್ರಕ್ರಿಯೆಗಳ ದಕ್ಷತೆಯನ್ನು ಅಳೆಯಲು ಮತ್ತು ಮೇಲ್ವಿಚಾರಣೆ ಮಾಡಲು ಇಲಾಖೆಯು ಕಾರ್ಯಕ್ಷಮತೆ ಸೂಚಕಗಳನ್ನು ನಿರ್ದಿಷ್ಟಪಡಿಸದಿರುವುದನ್ನು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಬಿಲ್‌ಗಳ ಸಂಸ್ಕರಣೆಗೆ ವೇಳಾಪಟ್ಟಿ ಇಲ್ಲದಿರುವುದು, ವಿಫಲ ಪಾವತಿಗಳ ಮರುಸಂಸ್ಕರಣೆ ಇತ್ಯಾದಿಗಳು ಅಪ್ಲಿಕೇಶನ್ ಸಿಸ್ಟಮ್‌ನ ದಕ್ಷತೆಯ ಮೇಲೆ ಪರಿಣಾಮ ಬೀರಿರುವುದನ್ನೂ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಿಸಲಾಯಿತು.

**(ಕಂಡಿಕೆ 5.4)**